ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪಾರದ ಮೊತ್ತದ ಬಗ್ಗೆ

೧೩೪೭ (೨೫೦೫) (ಎ) ಶ್ರೀ ಕೆ. ಹೆಚ್. ಪಾಟೀಲ್, (ಗದಗ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,—

ಅ) ಧಾರವಾಡ ಜಿಲ್ಲೆಯಲ್ಲಿ ಕೃಷಿ ಉತ್ಪನ್ನಗಳ ವ್ಯವಹಾರ ನಡೆಸುತ್ತಿರುವ ಪ್ರತಿಯೊಂದು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ವ್ಯಾಪಾರದ ಮೊತ್ತ ಪೈಷ್ಟು ?

ಆ) ಬಹುತೇಕ ಮಾರುಕಟ್ಟೆ ಸಮಿತಿಗಳು ಕೃಷಿ ಉತ್ಪನ್ನಗಳ ವ್ಯವಹಾರ ನಡೆಸುತ್ತಿಲ್ಲವೆಂಬುದು ನಿಜವೆ?

ಇ) ಹಾಗಿದ್ದ ಪಕ್ಷದಲ್ಲಿ ಕಾರಣಗಳೇನು ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).—

ಅ) ಧಾರವಾಡ ಜಿಲ್ಲೆಯ ೧೫ ಮಾರುಕಟ್ಟೆ ಸಮಿತಿಗಳಲ್ಲಿ ೧೯೮೬-೮೭ನೇ ಸಾಲಿನಲ್ಲಿ ನಡೆದ ಘೋಷಿತ ಕೃಷಿ ಉತ್ಪನ್ನಗಳ ಮಾರಾಟದ ವಿವರ ಈ ರೀತಿ ಇದೆ.

ಮಾರುಕಟ್ಟೆ ಸಮಿತಿಯ ಹೆಸರು	ವಹಿವಾಟು (ಕೋಟಿ ರೂ. ಗಳಲ್ಲಿ)
೧) ಅಣ್ಣಿಗೇರಿ	೩.೯೯
೨) ಕುಂದಗೋಳ	೧.೪೧
೩) ಗದಗ	೧೭.೮೦
೪) ಧಾರವಾಡ	೧೩.೪೩
೫) ನರಗುಂದ	೧೦.೩೦
೬) ಬ್ಯಾಡಗಿ	೬.೭೨
೭) ಮುಂಡರಗಿ	೧.೦೩
೮) ರಾಣೇಬೆನ್ನೂರು	೧೬.೩೪
೯) ರೋಣ	೧.೧೨
೧೦) ಲಕ್ಷ್ಮೇಶ್ವರ	೩.೬೬
೧೧) ಸವಣೂರು	೧.೬೦
೧೨) ಹಾನಗಲ್	೧.೩೧
೧೩) ಹಾವೇರಿ	೫.೪೪
೧೪) ಹಿರೇಕೆರೂರು	೧.೩೦
೧೫) ಹುಬ್ಬಳ್ಳಿ	೩೨.೮೬
ಒಟ್ಟು	೧೧೮.೩೧

ಆ) ಇದು ನಿಜವಲ್ಲ.

ಇ) ಉದ್ಭವಿಸುವುದಿಲ್ಲ.

೩ನೇ ಹಿಂದುಳಿದ ವರ್ಗಗಳ ಆಯೋಗ

೧೩೪೮ (೨೬೪೫) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರ್ಕಾರದವರು ೩ನೇ ಹಿಂದುಳಿದ ವರ್ಗಗಳ ಆಯೋಗವನ್ನು ನೇಮಿಸಿರುತ್ತಾರೆಯೇ ? ಹಾಗಿದ್ದಲ್ಲಿ ಎಂದು ?

ಆ) ಆಯೋಗವು ಆದರ ವರದಿಯನ್ನು ಎಂದು ಸರ್ಕಾರಕ್ಕೆ ಒಪ್ಪಿಸುವುದು ?

ಇ) ಆಯೋಗದ ವಿವಿಧ ಬಾಬ್ತುಗಳಿಗೆ ತಗಲಬಹುದಾದ ಅಂದಾಜು ವೆಚ್ಚ,

ಈ) ಆಯೋಗವು ಮಹಿಳೆಯರನ್ನು ಹಿಂದುಳಿದ ವರ್ಗವೆಂದು ಪರಿಗಣಿಸುವುದೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಹೌದು. ದಿನಾಂಕ ೯-೩-೧೯೮೮ರಂದು ರಚಿಸಲಾಗಿದೆ.

ಆ) ದಿನಾಂಕ ೯-೩-೧೯೮೮ರಿಂದ ಒಂದು ವರ್ಷದ ಒಳಗಡೆ ವರದಿ ನೀಡುವಂತೆ ಆಯೋಗಕ್ಕೆ ಸೂಚಿಸಲಾಗಿದೆ.

ಇ) ಆಯೋಗದ ವಿವಿಧ ಬಾಬ್ತುಗಳಿಗೆ ತಗಲಬಹುದಾದ ಅಂದಾಜು ವೆಚ್ಚ ಈ ಕೆಳಕಂಡಂತಿದೆ.

ಆವರ್ತಕ ವೆಚ್ಚ		ಆವರ್ತಕ ವೆಚ್ಚ	
(ಲಕ್ಷ ರೂಗಳಲ್ಲಿ)			
೧. ವೇತನ	೧.೦೦	೧. ಕಛೇರಿ ಪೀಠೋಪ	
೨. ಪ್ರಯಾಣ ತುಟ್ಟಿ ಭತ್ಯ	೧.೫೦	ಕರಣ ಇನ್ನಿತರೆ ಸಮಾಗ್ರಿ	೨.೦೦
೩. ಕಛೇರಿ ವೆಚ್ಚ	೨.೦೦೨.	ಬೆರೆಳಚ್ಚು ಯಂತ್ರ	೦.೧೬
೪. ಇತರೆ ವೆಚ್ಚ	೧.೦೦	೩. ಕಾರು ವ್ಯಾನ್ ಕರೀದಿ	೩.೦೦
೫. ಕಟ್ಟಡ ಬಾಡಿಗೆ	೧.೦೨		
ಒಟ್ಟು	೧೨.೫೦	ಒಟ್ಟು	೫.೧೬

ಈ) ಈ ಬಗ್ಗೆ ಆಯೋಗದ ಟರ್ಮಸ್ ಆಫ್ ರೆಫರೆನ್ಸ್‌ನಲ್ಲಿ ಉಲ್ಲೇಖ ಇಲ್ಲದ್ದರಿಂದ ಉದ್ಭವಿಸುವುದಿಲ್ಲ:

ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಊಟ ವಸತಿ ಖರ್ಚಿನ ಬಗ್ಗೆ

೧೩೪೯ (೨೦೮೨) ಶ್ರೀ ಬಿ. ಬಸಲಿಂಗಪ್ಪ (ಯಲಹಂಕ). —ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿನಿಲಯಗಳಲ್ಲಿನ ಕಾಲೇಜು ವಿದ್ಯಾರ್ಥಿಗಳಿಗೆ ಕೊಡುವ ಹೆಚ್ಚುವರಿ ಊಟ ವಸತಿ ವೆಚ್ಚದ ಹಣವೆಷ್ಟು ?

ಆ) ಯಾವ ಆಧಾರದ ಮೇಲೆ ಈ ಹಣವನ್ನು ನಿಗದಿಪಡಿಸಲಾಗಿದೆ, ಮತ್ತು ಯಾವಾಗ ಈ ಹಣವನ್ನು ನಿಗದಿಪಡಿಸಲಾಗಿದೆ.

ಇ) ಬೆಲೆ ಸೂಚ್ಯಂಕದ ಆಧಾರದ ಮೇಲೆ ಈ ಹಣವನ್ನು ನಿಗದಿಪಡಿಸಲಾಗಿದೆಯೇ ?

ಈ) ದಿನಂಪ್ರತಿ ಪ್ರತಿ ವಿದ್ಯಾರ್ಥಿಗಾಗಿ ಕನಿಷ್ಟ ೧೦-೦೦ ರೂ. ಗಳು ೨ ಊಟ ಮತ್ತು ಇತರೆ ಅಗತ್ಯಗಳಾದ ವಿದ್ಯುಚ್ಛಕ್ತಿ ಸಿಬ್ಬಂದಿ ಮತ್ತು ನಿರ್ವಹಣಾ ವೆಚ್ಚಕ್ಕಾಗಿ ಬೇಕಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಭಾರತ ಸರ್ಕಾರದ ವಿದ್ಯಾರ್ಥಿ ವೇತನವನ್ನು ಬಿಟ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮಂಜೂರಾಗುವ ಹೆಚ್ಚುವರಿ ಊಟ, ವಸತಿಯ ಈಗಿನ ಮಿತಿ ರೂ ೧೫೦-೦೦ಗಳನ್ನು ೨೫೦-೦೦ ರೂ. ಗಳಿಗೆ ಹೆಚ್ಚಿಸಲು ಪ್ರಸ್ತಾವನೆ ಸರ್ಕಾರದ ಮುಂದಿದೆಯೆ ?